ಇ) ಮಳೆ ಹಾನಿ ದುರಸ್ಥಿಗೆ ಬಿಡುಗಡೆ ಮಾಡಲಾದ ಹಣವನ್ನು ಯಾರ ಮೂಲಕ ಬಿಡುಗಡೆ ಮಾಡಲಾಗುತ್ತಿದೆ?

ಈ) ಮಳೆ ಹಾನಿ ದುರಸ್ಥಿಗೆ ನೀಡಲಾಗುವ ಹಣದಬಗ್ಗೆ ಆಯಾ ಕ್ಷೇತ್ರದ ಶಾಸಕರ ಗಮನಕ್ಕೆ ತರಲಾಗುತ್ತಿದೆಯೇ?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) 1995-96, 1996-97 ಹಾಗೂ 1997-98ನೇ ಸಾಲುಗಳಲ್ಲಿ ಕೊಡಗು ಜಿಲ್ಲೆಗೆ ಮಳೆಹಾನಿ ಪರಿಹಾರ ಕಾರ್ಯದ ಸಲುವಾಗಿ ಕ್ರಮವಾಗಿ ರೂ. 62.00, 135.00 ಹಾಗೂ 345.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಈ ಪೈಕಿ ತಾಲ್ಲೂಕುವಾರು ಮರು ಹಂಚಿಕೆಯ ವಿವರ ಹೀಗಿದೆ -

(ಲಕ್ಷ ರೂ.ಗಳಲ್ಲಿ)

ವರ್ಷ	ಮಡಿಕೇರಿ	ಸೋಮವಾರಪೇಟೆ	ವೀರಾಜಪೇಟೆ	ಒಟ್ಟು
1995-96	14.67	6.00	43.82	64.49
1996-97	69.67	18.70	45.12	133.49
1997-98	67.83	55.15	68.36	191.34

ಆ) ನಿಯಮಾನುಸಾರ ಖಾಸಗಿ ಆಸ್ತಿ ಹಾನಿಗೆ ಪರಿಹಾರ ನೀಡಲು ಹಾಗೂ ತೀವ್ರವಾಗಿ ಹಾನಿಗೆ ಒಳಗಾದ ಸಾರ್ವಜನಿಕ ಆಸ್ತಿಗಳ ತುರ್ತು ದುರಸ್ಥಿಗೆ ಈ ಹಣವನ್ನು ಬಳಸಲಾಗುತ್ತಿದೆ.

ಇ) ಸರ್ಕಾರವು ಜಿಲ್ಲಾಧಿಕಾರಿಗಳಿಗೆ ಹಣ ಬಿಡುಗಡೆ ಮಾಡುತ್ತದೆ. ಜಿಲ್ಲಾಧಿಕಾರಿಗಳು ಖಾಸಗಿ ಆಸ್ತಿ ಹಾನಿಗೆ ಪರಿಹಾರ ನೀಡಲು ಆಯಾ ತಾಲ್ಲೂಕಿನ ತಹಸೀಲ್ದಾರರಿಗೆ, ಸಾರ್ವಜನಿಕ ಆಸ್ತಿ ದುರಸ್ಥಿಗೆ ಲೋಕೋಪಯೋಗಿ ಇಲಾಖೆ, ಜಿಲ್ಲಾ ಪಂಚಾಯತ್ ಇಂಜೀನಿಯರಿಂಗ್ ವಿಭಾಗ, ಪುರಸಭೆ : ಪಟ್ಟಣ ಪಂಚಾಯತಿಗಳ ಮುಖ್ಯಾಧಿಕಾರಿಗಳಿಗೆ ಅನುದಾನವನ್ನು ಮರು ಹಂಚಿಕೆ ಮಾಡುತ್ತಾರೆ.

ಈ) ಹೌದು.

ವಿಷಯ: ಶಿಗ್ಗಾಂವ, ಸವಣೂರು, ಬಂಕಾಪುರಗಳಿಗೆ ಕುಡಿಯುವ ನೀರಿನ ಯೋಜನೆ.

1054 (1436)

ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯಿಂದ ಎಷ್ಟು ಕುಡಿಯುವ ನೀರಿನ ಯೋಜನೆಗಳನ್ನು ತೆಗೆದುಕೊಳ್ಳಲಾಗಿದೆ? ಅವು ಯಾವುವು?

ಆ) ಸದರಿ ಯೋಜನೆಗಳನ್ನು ಎಂದು ಪ್ರಾರಂಭಿಸಲಾಗಿದೆ? ಅವುಗಳಿಗೆ ಎಷ್ಟು ಹಣ ಖರ್ಚು ಮಾಡಲಾಗಿದೆ?

ಇ) ಸದರಿ ಇಲಾಖೆಯಿಂದ ಮಾಡಲು ತೆಗೆದುಕೊಂಡ ಯೋಜನೆಗಳನ್ನು ಪೂರ್ತಿಗೊಳಿಸದಯೇ ಹೊಸ ಯೋಜನೆ ತೆಗೆದುಕೊಳ್ಳುವ ಉದ್ದೇಶವೇನು?

ಈ) ಶಿಗ್ಗಾಂವ, ಸವಣೂರು, ಬಂಕಾಪುರ ಕುಡಿಯುವ ನೀರಿನ ಯೋಜನೆ ಎಷ್ಟು ದಿವಸಗಳಲ್ಲಿ ಮುಗಿಸಲಾಗುವುದು?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):

ಅ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯು 98 ನೀರು ಸರಬರಾಜು ಯೋಜನೆಗಳ ಕಾರ್ಯವನ್ನು ಕೈಗೆತ್ತಿಕೊಂಡಿದೆ. ಅವುಗಳ ಪಟ್ಟಿಯನ್ನು ಸಭೆಯ ಮುಂದೆ ಇಡಲಾಗಿದೆ.

ಆ) ವಿವರಗಳು ಸದರಿ ಪಟ್ಟಿಯಲ್ಲಿ ಲಭ್ಯವಿದೆ.

ಇ) ಕುಡಿಯುವ ನೀರಿನ ಅಭಾವ ತೀವ್ರವಾಗಿರುವ ಪಟ್ಟಣಗಳಿಗೂ ಸಮರ್ಪಕವಾಗಿ ಕುಡಿಯುವ ನೀರು ಒದಗಿಸುವ ಆಧಾರದ ಮೇಲೆ ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.

ಈ) ಶಿಗ್ಗಾಂವ ಮತ್ತು ಸವಣೂರು ಪಟ್ಟಣಗಳಿಗೆ ಕುಡಿಯುವ ನೀರಿನ ಯೋಜನೆಯನ್ನು 1999ರ ಅಂತ್ಯಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಬಂಕಾಪುರ ಪಟ್ಟಣದ ಬಗ್ಗೆ ಗ್ರಾಮೀಣಾಭಿವೃದ್ಧಿ ಇಲಾಖೆ ತೆಗೆದುಕೊಂಡಿರುವ ನಿಲುವಿನಿಂದಾಗಿ ಈ ಯೋಜನೆಯನ್ನು ಈ ವ್ಯಾಪ್ತಿಯಿಂದ ಕೈಬಿಡಲಾಗಿದೆ.

ವಿಷಯ: ಮೈಸೂರು ವಲಯದಲ್ಲಿ ಉತ್ಪಾದನೆಯಾದ ರೇಷ್ಮೆಗೂಡು

1055 (1530)

L.A.-209/41

ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್): ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಐದು ವರ್ಷಗಳಲ್ಲಿ ಮೈಸೂರು ವಲಯದಲ್ಲಿ ಉತ್ಪಾದನೆಯಾದ ರೇಷ್ಮೆಗೂಡು ಎಷ್ಟು? (ಪ್ರತಿ ವರ್ಷ ವಿವರ ನೀಡುವುದು)

ಆ) ಈ ಪೈಕಿ ಬಿತ್ತನೆ ಹಾಗೂ ನೂಲು ಬಿಚ್ಚಲು ಹೋಗಿರುವ ಗೂಡು ಎಷ್ಟು?

ಶ್ರೀ ಎಂ.ವರದೇಗೌಡ (ರೇಷ್ಮೆ ರಾಜ್ಯ ಸಚಿವರು):

ಅ) ಮೈಸೂರು ಬಿತ್ತನೆ ವಲಯದಲ್ಲಿ ಉತ್ಪಾದನೆಯಾದ ಗೂಡುಗಳ ಸಂಖ್ಯೆ

(ಲಕ್ಷಗಳಲ್ಲಿ)

1.	1993-94	19098.74
1.	1994-95	19523.16
3.	1995-96	16692.88
4.	1996-97	14682.83
5.	1997-98	15979.14

ಆ) (ಲಕ್ಷಗಳಲ್ಲಿ)

		ಬಿತ್ತನೆಗೆ	ನೂಲು ಬಿಚ್ಚಾಣಿಕೆಗೆ
1.	1993-94	8273.36	10825.38
1.	1994-95	7873.82	11649.34
3.	1995-96	7961.42	8731.46
4.	1996-97	7922.43	6760.40
5.	1997-98	8267.32	7711.82

ವಿಷಯ: ರೇಷ್ಮೆ ಇಲಾಖೆಯ ಮೈಸೂರು ಬಿತ್ತನೆವಲಯದಲ್ಲಿ 'ಡಿ' ಗ್ರೂಪ್ ನೌಕರರು.